

ಕನಸು ಕಾಣುವುದು ಮನುಷ್ಯಸಹಜ ಗುಣ. ಕನಸುಗಳು ಇಲ್ಲದೆಹೋದಲ್ಲಿ ನಾಳೆಗಳು ನೀರಸವೆನ್ನಿಸುತ್ತವೆ; ಬದುಕು ಕಳಾಹೀನವಾಗುತ್ತದೆ. ಕನಸುಗಾರಿಕೆ ಒಂದು ಬಗೆಯಲ್ಲಿ ಜೀವನಪ್ರೀತಿಯ ಸಂಕೇತವೂ ಹೌದು. ಆ ಕಾರಣದಿಂದಲೇ ನಮ್ಮ ಕನಸುಗಳಿಗೆ ಮೌಲ್ಯವಿದೆ. ಆದರೆ, ಭವಿತವ್ಯದ ಕುರಿತ ನಮ್ಮ ಬಹುತೇಕ ಕನಸುಗಳು ವ್ಯಕ್ತಿಗತವಾಗಿರುತ್ತವೆ ಇಲ್ಲವೇ ಕುಟುಂಬದ ಹಿತಕ್ಕೆ ಸೀಮಿತವಾಗಿರುತ್ತವೆ. ನಮ್ಮ ಕನಸುಗಳು ವಿಸ್ತಾರಗೊಂಡು, ವಿಶ್ವವೆನ್ನುವ ಕುಟುಂಬದ ಬಗ್ಗೆ ಕನಸುಗಳು ವಿಸ್ತಾರಗೊಳ್ಳುವುದು ಈ ಹೊತ್ತಿನ ಅಗತ್ಯ. ಈ ನಿಟ್ಟಿನಲ್ಲಿ, 2020ರ ಹೊಸವರ್ಷದ ಸಂದರ್ಭದಲ್ಲಿ ನಮ್ಮ ಕನಸುಗಳು ಏನೆಲ್ಲ ಆಗಿರಬೇಕು ಎನ್ನುವ ಪ್ರಶ್ನೆಯನ್ನು ನಾಡಿನ ವಿವಿಧ ಕ್ಷೇತ್ರಗಳ ಕನಸುಗಾರರು–ಸಾಧಕರ ಮುಂದೆ ‘ಸುಧಾ’ ಇರಿಸಿತು. ಆ ಪ್ರಶ್ನೆಗೆ ವ್ಯಕ್ತವಾದ ಅಭಿಪ್ರಾಯಗಳು ಆಸಕ್ತಿಕರವಾಗಿವೆ ಹಾಗೂ ನಾಳೆಗಳ ಬಗ್ಗೆ ನಿರೀಕ್ಷೆಗಳನ್ನು ಹುಟ್ಟಿಸುವಂತಿವೆ. ಇಲ್ಲಿನ ಕನಸುಗಳು ಎಲ್ಲರದೂ ಆಗಲಿ, ಹೊಸ ವರ್ಷ ನಮ್ಮನ್ನು ಆರೋಗ್ಯಕರ ಸಮಾಜ ರೂಪುಗೊಳ್ಳುವ ಪ್ರಕ್ರಿಯೆಯತ್ತ ನಡೆಸಲಿ ಎನ್ನುವುದು ‘ಸುಧಾ’ ಆಶಯ.




# ಜಾಗೃತಾವಸ್ಥೆಯ ಎಂಟು ಸ್ವಪ್ನಗಳು

ಬೆಜವಾಡ ವಿಲ್ಸನ್

ಕಾವ್ಯಾ ಕಡಮೆ

ಸಂಧ್ಯಾದೇವಿ

ವಸಂತ ಕಜೆ

ನಿರ್ವಹಣೆ:
**ಪದ್ಮನಾಭ ಭಟ್**